# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-784/2014/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 5/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಎಸ್.ಕುಮಾರಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ವಿಭಾಗ, (ಹಾಲಿ ನಿವೃತ್ತ) (2) ಶ್ರೀ.ಬಿ.ವಿ.ಬೈರಾರೆಡ್ಡಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮತ್ತು (3) ಶ್ರೀ.ವೈ.ಜಿ.ಚಂದ್ರಪ್ಪ, ವಲಯ ಅರಣ್ಯಾಧಿಕಾರಿ, ಹೊಳಲ್ಕೆರೆ ವಲಯ, ಚಿತ್ರದುರ್ಗ ಜಿಲ್ಲೆ, (ಹಾಲಿ ನಿವೃತ್ತ) – ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ರವಿ ಸಿ.ಹೆಚ್ ಬಿನ್ ಹನುಮಂತಪ್ಪ, ಹಿರೆಗುಂಟನೂರು ಹೋಬಳಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಎಸ್.ಕುಮಾರಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ವಿಭಾಗ, (ಹಾಲಿ ನಿವೃತ್ತ), (2) ಶ್ರೀ.ಬಿ.ವಿ.ಬೈರಾರೆಡ್ಡಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮತ್ತು (3) ಶ್ರೀ.ವೈ.ಜಿ.ಚಂದ್ರಪ್ಪ, ವಲಯ ಅರಣ್ಯಾಧಿಕಾರಿ, ಹೊಳಲ್ಕೆರೆ ವಲಯ, ಚಿತ್ರದುರ್ಗ ಜಿಲ್ಲೆ, (ಹಾಲಿ ನಿವೃತ್ತ), (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಮೆ:ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಈ ಉದ್ಯಮಕ್ಕೆ ಸುಮಾರು 109.07 ಹೆಕ್ಟೇರ್‌ಗಳಷ್ಟು ಚಿತ್ರದುರ್ಗ ತಾಲ್ಲೂಕಿನ ನೀರ್ತಾಡಿ ಅರಣ್ಯ ಪ್ರದೇಶದ ಜಮೀನನ್ನು ಗಣಿ ಉದ್ಯಮಕ್ಕೆ ಕಾನೂನು ಬಾಹಿರವಾಗಿ ಪರವಾನಗಿ ನೀಡಿರುತ್ತಾರೆಂದು, ಸದರಿ ಉದ್ಯಮಕ್ಕೆ ಸ.ನಂ.5, ಬಿ.ಬಿ.ಹಳ್ಳಿ ಗ್ರಾಮದಿಂದ ಭೀಮಸಮುದ್ರ ಮತ್ತು ಮೇಗಳಹಳ್ಳಿ ಪೆಟ್ರೋಲ್ ಬಂಕ್‌ರವರೆಗಿನ ಸರ್ಕಾರಿ ಜಮೀನನ್ನು ಸುಮಾರು 2.82 ಹೆಕ್ಟೇರ್‌ನಷ್ಟು ಒತ್ತುವರಿ ಮಾಡಿಕೊಂಡು ಕಾನೂನು ಬಾಹಿರವಾಗಿ ಮೂರು ರಸ್ತೆಯನ್ನು ನಿರ್ಮಿಸಿಕೊಂಡಿರುತ್ತಾರೆ. ಮೆ:ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯವರು ಅರಣ್ಯ ಜಮೀನನ್ನು ಒತ್ತುವರಿ ಮಾಡಿಕೊಂಡು ರಸ್ತೆಯನ್ನು ಯಾವುದೇ ಅನುಮತಿ ಪಡೆಯದೆ ನಿರ್ಮಿಸಿಕೊಂಡಿರುತ್ತಾರೆ. ಈ ಬಗ್ಗೆ ಎದುರುದಾರರಿಗೆ ದೂರು ನೀಡದರೂ ಸಹ ಯವುದೇ ಕ್ರಮ ಜರುಗಿಸಿರುವುದಿಲ್ಲವೆಂದು, ಎದುರುದಾರರು ಸಹ ಸದರಿ ಗಣಿ ಉದ್ಯಮದ ಮಾಲೀಕರಾದ ಶ್ರೀ.ಬಸಂತ್ ಪೊದ್ದಾರ್ ಎಂಬುವವರ ಜೊತೆ ಶಾಮೀಲಾಗಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿ, ಸದರಿ ಆಕ್ಷೇಪಣೆಗಳು ಒಂದೇ ರೀತಿಯ ಅಂಶಗಳನ್ನು ಹೊಂದಿರುವುದು ಕಂಡುಬಂದಿರುತ್ತದೆ.

ಸದರಿ ಆಕ್ಷೇಪಣೆಗಳಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆಯುವುದರ ಜೊತೆಗೆ ಸದರಿ ಅವಧಿಯಲ್ಲಿ ಅವರು ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು, ದೂರುದಾರರು ತಮ್ಮ ದೂರು ಅರ್ಜಿಯ ಕಂಡಿಕೆ 3, 4, 5,6 ಮತ್ತು 7ರಲ್ಲಿ ನಮೂದಿಸಿರುವ ದಾಖಲೆ ಸಂ.2,3,4,5 ಮತ್ತು 6 ಇವುಗಳು ಅವರು ಪ್ರಭಾರ ವಹಿಸಿಕೊಳ್ಳುವ ಅಂದರೆ ದಿ.28/6/2012 ರ ಹಿಂದಿನ ಪತ್ರ ವ್ಯವಹಾರಗಳಾಗಿರುತ್ತವೆಂದೆ ಅವರ ಅವಧಿಯ ಪತ್ರಗಳಲ್ಲಿ ಅವರಿಗೆ ಸಂಬಂಧಿಸದ್ದಲ್ಲವೆಂದು, ಇತ್ಯಾದಿಗಳ ವಿಷಯಗಳನ್ನು ಹೇಳಿರುತ್ತಾರೆ. ಮುಂದುವರೆದು, ಈ ಪ್ರಕರಣಕ್ಕೂ ಅವರಿಗೂ ಯಾವುದೇ ರೀತಿಯ ಸಂಬಂಧಿವಿಲ್ಲವೆಂದು ಹೇಳಿ ಅವರ ವಿರುದಧ ಇರುವ ಈ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ವಿನಂತಿಸಿಕೊಂಡಿರುತ್ತಾರೆ.

4. ನಂತರ ದೂರುದಾರರ ದೂರು ಮತ್ತು 1 ರಿಂದ 3ನೇ ಎದುರುದಾರರುಗಳ ಆಕ್ಷೇಪಣೆಯ ಮೇಲೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ತನಿಖೆ ನಡೆಸಿ ವರದಿಯನ್ನು ಪಡೆದುಕೊಂಡಿದ್ದು, ಅದರಲ್ಲಿ ದೂರುದಾರರು ಆಪಾದಿಸಿರುವಂತೆ ಮೆ:ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್‌ನಲ್ಲಿ ಹಾಲಿ ಯಾವುದೇ ಗಣಿ ಚಟುವಟಿಕೆಗಳು ನಡೆಯುತ್ತಿರುವುದಿಲ್ಲ. ಸಿ.ಇ.ಸಿ. ವರದಿಯ ಪ್ರಕಾರ ಸದರಿ ಮೈನಿಂಗ್ ಕಂಪನಿಯು 'ಎ' ಕೆಟಗರಿ ಕಂಪನಿಯಾಗಿರುತ್ತದೆಂದು, ಸದರಿ ಕಂಪನಿಯು 1952 ರಿಂದ ನಡೆಯತ್ತಿರುವುದಾಗಿ, 1972 ರಿಂದ ಈವರೆಗೆ ಮೈನ್ಸ್ ಲೀಸ್ ನಂ.1974ರಲ್ಲಿ 259 ಹೆಕ್ಟೇರ್‌ಗಳಿಗೆ ಗುತ್ತಿಗೆ ಪಡೆದಿರುತ್ತಾರೆಂದು, ಆ ನಕ್ಷೆಯನ್ನು ಪಡೆದು ಪರಿಶೀಲಿಸಿದ್ದು, ಸದರಿ ನಕ್ಷೆಯಲ್ಲಿ ಬಂಡಿ ದಾರಿ ಇರುವುದು ಕಂಡುಬಂದಿರುವುದಾಗಿ, ಗಣಿ ಚಟುವಟಿಕೆ ರಸ್ತೆಗಳಿಗಾಗಿ 5.44 ಹೆಕ್ಟೇರ್ ಅರಣ್ಯ ಭೂಮಿಯನ್ನು ಗುತ್ತಿಗೆ ಪಡೆಯಲು ಅನುಮತಿಗಾರಿ ಪ್ರಸ್ತಾವನೆ ಸಲ್ಲಿಸಿರುವುದು ಕಂಡುಬಂದಿರುತ್ತದೆಂದು, ಇಲ್ಲಿ ಯವುದೇ ರೀತಿಯ ಅರಣ್ಯ ಕಾಯ್ದೆಯ ಉಲ್ಲಂಘನೆಯಾದಂತೆ ಕಂಡುಬಂದಿರುವುದಿಲ್ಲವೆಂದು, ದುರುದಾರರು ತಪ್ಪು ತಿಳುವಳಿಕೆಯಿಂದ ಸರ್ಕಾರಿ ನವಕರರಿಗೆ ಮತ್ತು ಮೈನ್ಸ್ ಕಂಪನಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಸುಳ್ಳು ಅರ್ಜಿಯನ್ನು ಬರೆದಿರುತ್ತಾರೆಂದು ಹೇಳಿ, ಈ ದೂರು ಅರ್ಜಿಯನ್ನು ಮುಕ್ತಾಯ ಗೊಳಿಸಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

5. ತನಿಖಾಧಿಕಾರಿಯ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ರವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು ಇವರಿಗೆ ದಿ.25/3/2013 ರಲ್ಲಿ ಬರೆದಿರುವ ಪತ್ರದಲ್ಲಿ ರಸ್ತೆಯ ಬಗ್ಗೆ ಪ್ರಸ್ತಾಪಿಸಿ ರಸ್ತೆಗಳನ್ನ ಹಿಂದಿನಿಂದ ಗಣಿ ಕಂಪನಿಯವರು ಮಾತ್ರ ಉಪಯೋಗಿಸಿದ್ದು, ಸದರಿ ರಸ್ತೆಗಳಿಗೆ ಅರಣ್ಯಾ ಸಂರಕ್ಷಣಾ ಕಾಯಿದೆ 1980 ಪ್ರಕಾರ ಅನುಮೋದನೆ ಪಡೆದಿಲ್ಲ ಹಾಗೂ ಕಾಯ್ದೆಯ ಉಲ್ಲಂಘನೆಯಾಗಿದೆಯೆಂದು ಮುಂದಿನ ಕ್ರಮಕ್ಕೆ ಬರೆದಿರುತ್ತಾರೆ. ಗಣಿ ಕಂಪನಿ 1972 ರಿಂದ 1992 ಮತ್ತು 1992 ರಿಂದ 2012 ರವರೆಗೂ ಅರಣ್ಯ ಸಂರಕ್ಷಣಾ ಕಾಯಿದೆ ಪ್ರಕಾರ ಪಡೆದಿರುವ ನಕ್ಷೆಗಳಲ್ಲಿ ಈ ರಸ್ತೆಗಳಿಗೆ ಅನುಮೋದನೆ ಇರುವುದಿಲ್ಲ. ಆದರೂ ಸಿ.ಇ.ಸಿ.ಎ ಈ ರಸ್ತೆಗಳು ಗಣಿ ವ್ಯಾಪ್ತಿಗೆ ಒಳ ಪಡುತ್ತವೆಯೆಂದು ತಪ್ಪು ಮಾಹಿತಿ ನೀಡಿ ಆರ್.ಆರ್.ಪ್ಲಾನ್‌ನಲ್ಲಿ ನಮೂದಿಸಿರುತ್ತಾರೆ. ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿತ್ರದುರ್ಗ ಇವರು

ದಿ.1/12/11 ರಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ 1980 ರ ಪ್ರಕಾರ ರಸ್ತೆ ಅಗಲೀಕರಣಗೊಳಿಸಲು ಅವಕಾಶವಿರುವುದಿಲ್ಲವೆಂದು ಹೇಳಿರುತ್ತಾರೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದಿ.8/1/14 ರ ಪತ್ರದಲ್ಲಿ ಗಣಿ ಕಂಪನಿಯ ವಿರುದ್ಧ ಅರಣ್ಯ ಅಪರಾಧ ಮೊಕದ್ದಮೆ ಹೂಡಲು ತಿಳಿಸಿರುತ್ತಾರೆ. ಆದ್ದರಿಂದ, ಗಣಿ ಕಂಪನಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

6. ದೂರುದಾರರ ದೂರನ್ನು ಪರಿಶೀಲಿಸಿದಾಗ, ಅದಿರನ್ನು ಸಾಗಿಸಲು ಮೆ:ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಯವರು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ರಸ್ತೆಯನ್ನು ನಿರ್ಮಿಸಿ ಅರಣ್ಯ ಕಾಯಿದೆಯ ಉಲ್ಲಂಘನೆ ಮಾಡಿರುತ್ತಾರೆ ಎಂದು ಅಪಾದಿಸಿದ್ದು, ಅದನ್ನು ಗಮನಿಸಿದಾಗ, ಸದರಿ ಕಂಪನಿಗೆ ಅದಿರು ಸಾಗಾಣಿಕೆಗೆ ಯಾವ ವರ್ಷದಿಂದ ಯಾವ ವರ್ಷದವರೆಗೆ ಪರವಾನಗಿಯನ್ನು ನೀಡಲಾಗಿದೆ ಮತ್ತು ಯಾವ ರಸ್ತೆಯ ಮೂಲಕ ಅದಿರನ್ನು ಸಾಗಿಸಲು ಅನುಮತಿ ನೀಡಲಾಗಿದೆ ಎನ್ನುವ ಬಗ್ಗೆ ಕೂಲಂಕುಷವಾದ ಪರಿಶೀಲನೆ ನಡೆಸುವ ಅಗತ್ಯ ಕಂಡುಬರುತ್ತದೆ. ಆದ್ದರಿಂದ, ದೂರುದಾರರ ದೂರಿನ ಬಗ್ಗೆ ಮತ್ತು ಮೇಲೆ ಹೇಳಿದ ವಿಚಾರಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರಿಗೆ ಆದೇಶಿಸಲಾಗಿತ್ತು.

7. ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಒತ್ತುವರಿ ಮಾಡಿ ರಸ್ತೆಯನ್ನು ನಿರ್ಮಿಸಿಕೊಂಡು ಮತ್ತು ರಸ್ತೆಯನ್ನು ಅಗಲೀಕರಣ ಮಾಡಿ ಕಂಪನಿಯವರು ಅದಿರನ್ನು ಸಾಗಾಟ ಮಾಡುತ್ತಿದ್ದಾರೆಮದು ದೂರುದಾರರು ಅಪಾದಿಸಿದ್ದು, ಅರಣ್ಯ ಪ್ರದೇಶದಲ್ಲಿ ಅದಿರನ್ನು ಸಾಗಿಸಲು ಮತ್ತು ರಸ್ತೆಯನ್ನು ಅಗಲೀಕರಣ ಗೊಳಿಸಲು ಕಾನೂನುಬದ್ಧವಾಗಿ ಕಂಪನಿಯವರು ಪರವಾನಗಿಯನ್ನು ಪಡೆದಿರುತ್ತಾರೆಯೇ ಎನ್ನುವ ಬಗ್ಗೆ ಪರಿಶೀಲಿಸಬೇಕಾಗುತ್ತದೆ. ಸದರಿ ವಿಚಾರದ ಬಗ್ಗೆ ಕಂಪನಿಯ ವಿರುದ್ಧ ಮೊಕದ್ದಮೆ ಹೂಡಲು ಕೂಡ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿ ಮಾಡಿರುವ ಬಗ್ಗೆ ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ತಿಳಿಸಿರುತ್ತಾರೆ. ಮೇಲಿನ ಅಂಶಗಳನ್ನು ಗಮನಿಸಿದಾಗ, ಅರಣ್ಯ ಇಲಾಖೆಗೆ ಸೇರಿದ ರಸ್ತೆಯ ಮೂಲಕ ಅದಿರನ್ನು ಸಾಗಿಸಲು ಪರವಾನಗಿ ನೀಡಲಾಗಿದೆಯೇ, ನೀಡಿದ್ದಲ್ಲಿ ಅರಣ್ಯ ಸಂರಕ್ಷಣಾ ಕಾಯಿದೆ ಮತ್ತು ಅರಣ್ಯ ಕಾಯಿದೆಯ ಉಲ್ಲಂಘನೆಯಾಗಿದೆಯೇ, ಉಲ್ಲಂಘನೆಯಾಗಿದ್ದಲ್ಲಿ ಸದರಿ ಪರವಾನಗಿಯನ್ನು ನೀಡಿದ ಅಧಿಕಾರಿಗಳು ಯಾರು ಎಂಬ ಬಗ್ಗೆ ಪರಿಶೀಲನೆ ನಡೆಸಬೇಕಾಗುತ್ತದೆ. ಆದ್ದರಿಂದ, ಸದರಿ ವಿಚಾರಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ವರದಿ ನೀಡುವಂತೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವಿಜಿಲೆನ್ಸ್) ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

8. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಅರಣ್ಯ ಭವನ ಬೆಂಗಳೂರು ಇವರು ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

i. ದೂರರ್ಜಿಯಲ್ಲಿನ (1) ಮತ್ತು (2) ಅಂಶಗಳ ಬಗ್ಗೆ

1) ಮೆ: ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ರವರು ಅವರಿಗೆ ಲೀಜ ನೀಡಿದ ಪ್ರದೇಶದ ಹೊರಗೆ ನಿತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಅತಿಕ್ರಮಣ ಮಾಡಿ

ರಸ್ತೆಗೆ ನಿರ್ಮಿಸಿ ಸದರಿ ರಸ್ತೆ ಮೂಲಕ ಅದಿರು ಸಾಗಾಣಿಕೆಯನ್ನು ಮಾಡುತ್ತಿರುವುದು. ನಿರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದ ದಿಂಡದಹಳ್ಳಿ ಗ್ರಾಮದ ಸ.ನಂ.18 ರಲ್ಲಿ 1.50 ಹೆ. ಪ್ರದೇಶ ಅತಿಕ್ರಮಣ ಮಾಡಿ 2.00 ಕಿ.ಮೀ. ಅನಧಿಕೃತ ರಸ್ತೆ ನಿರ್ಮಾಣ ಮತ್ತು ಅಗಲೀಕರಣ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಳಲ್ಕೆರೆ ವಲಯರವರು ಕ.ಅ.ಕಾ.1963 ರ ಕಲಂ 24(ಎ),(ಜಿ),(ಜಿಜಿ),(ಹೆಚ್) ಮತ್ತು 73(ಡಿ) ಉಲ್ಲಂಘನೆ ಮಾಡಿದಂತೆ ಅರಣ್ಯ ಮೊಕದ್ದಮೆ ಸಂ.17/2009–10 ದಿ.25/5/2009 ರಂತೆ ಗುನ್ಹೆ ದಾಖಲಿಸಿದ್ದು, ದೋಷಾರೋಪಣಾ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿದ್ದು (ಸಿಸಿ ಸಂ.1299/2009 ದಿ.23/6/2009) ಸದರಿ ಪ್ರಕರಣ ನ್ಯಾಯಾಲಯದಲ್ಲಿದೆ.

2) ನೀರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದ ಬೆಡರುಬೊಮ್ಮನಹಳ್ಳಿ ಸ.ನಂ.5 ರಿಂದ ಮೈನ ಸಂ.2346 ರಿಂದ 2388 ರವರೆಗೆ ಮತ್ತು ತದನಂತರ ಭೀಮಸಮುದ್ರ ಮತ್ತು ಮೇಗಲಹಳ್ಳಿ ಪೆಟ್ರೋಲ್ ಬಂಕ್ ರಸ್ತೆ ತನಕ 2.82 ಹೆ. ಅರಣ್ಯ ಪ್ರದೇಶ ಒತ್ತುವರಿ ಮಾಡಿ ಅನಧಿಕೃತವಾಗಿ ರಸ್ತೆ ನಿರ್ಮಿಸಿ ಉಪಯೋಗಿಸುತ್ತಿರುವ ಬಗ್ಗೆ.

ಸದರಿ ರಸ್ತೆಗಳು ಅಸ್ತಿತ್ವದಲ್ಲಿದ್ದ ಬಗ್ಗೆ ಅಧಿಸೂಚನೆ ಸಂ.9670–ಪಿ.ಆರ್–ಎಫ್.ಟಿ–ಎಫ್–41–59 ದಿ.1.4.1989 ಮತ್ತು ಮರು ಅಧಿಸೂಚನೆ ಸಂ.ಜಿ–7707–ಎಫ್.ಟಿ–158–38–2 ದಿ.11/7/1939 ಯಲ್ಲಾಗಲೀ ಅಥವಾ ಸದರಿ ಅಧಿಸೂಚನೆಗಳ right of way (ದಾರಿ ಹಕ್ಕು) ಪ್ಯಾರಾ 23 ರಲ್ಲಿ ತಿಳಿಸಿದಂತೆ ಪಟ್ಟಿಗಳಲ್ಲಿ ಇರುವುದಿಲ್ಲ.

ನಿರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದ ದಿಂಡದಹಳ್ಳಿ ಗ್ರಾಮದ ಸ.ನಂ.18 ರಲ್ಲಿ 1.50 ಹೆ. ಪ್ರದೇಶ ಅತಿಕ್ರಮಣ ಮಾಡಿ 2.00 ಕಿ.ಮೀ. ಅನಧಿಕೃತ ರಸ್ತೆ ನಿರ್ಮಾಣ ಮತ್ತು ಅಗಲೀ ಮತ್ತು ಅಗಲೀಕರಣ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಳಲ್ಕೆರೆ ವಲಯರವರು ಕ.ಅ.ಕಾ.1963ರ ಕಲಂ24(ಎ),(ಜಿ),(ಜಿಜಿ),(ಹೆಚ್) ಮತ್ತು 73(ಡಿ) ಉಲ್ಲಂಘನೆ ಮಾಡಿದಂತೆ ಅರಣ್ಯ ಮೊಕದ್ದಮೆ ಸಂ.17/2009–10 ದಿ.25/5/2009 ರಂತೆ ಗುನ್ಹೆ ದಾಖಲಿಸಿದ್ದು, ದೋಷಾರೋಪಣಾ ಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿದ್ದು, (ಸಿ.ಸಿ.ಸಂ.1299/2009 ದಿ.23/6/2009) ಸದರಿ ಪ್ರಕರಣ ನ್ಯಾಯಾಲಯದಲ್ಲಿದ್ದು, ತದನಂತರ ಸದರಿ ಪ್ರಕರಣದ ವಿಲೇವಾರಿ ಬಗ್ಗೆ ಈವರೆಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗಾಗಲೀ, ವಲಯ ಅರಣ್ಯಾಧಿಕಾರಿಗಳಿಗಾಗಲಿ ಮಾಹಿತಿ ಇರುವುದಿಲ್ಲ. ಈ ಬಗ್ಗೆ ಪ್ಯಾರಾ 16 ರಲ್ಲಿ ವಿವರಿಸಿದಮತೆ ಶ್ರೀ.ಸಂದೀಪ ನಾಯಕ, ಆಗಿನ ದ್ವಿತೀಯ ದರ್ಜೆ ಮೋಜಣಿದಾರರು ಸದರಿ ರಸ್ತೆಗಳನ್ನು ಹಾಗೂ ನಿರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದ ಗಡಿಯನ್ನು ಭೂಮಾಪನ ಮಾಡಿ ಗ್ರಾಮ ನಕ್ಷೆಯಲ್ಲಿ ಗುರ್ತಿಸಿ ಸದರಿ ರಸ್ತೆಗಳು ಕಾಯ್ದಿಟ್ಟ ಅರಣ್ಯ ಪ್ರದೇಶದೊಳಗೆ ಬರುತ್ತಿರುವ ಬಗ್ಗೆ ದಿ.4/6/2009 ರ ವರದಿಯಲ್ಲಿ ನಮೂದಿಸಿರುತ್ತಾರೆ.

ನಿರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಮೆ:ಮಿನರಲ್ಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ರವರ ಎಂ.ಎಲ್.2346 (ಹಿಂದಿನ ಎಂ.ಎಲ್.1074) ಗಣಿ ಬ್ಲಾಕ್–1, 4 ಮತ್ತು 5 ಗಣಿಗಳಿಗೆ ಪ್ರವೇಶ ಮಾರ್ಗಗಳು ಹಾಗೂ ಕೂಡುರಸ್ತೆಗಳ ಬಗ್ಗೆ 2.50 ಹೆ. ಅರಣ್ಯ ಪ್ರದೇಶಕ್ಕೆ ಈ ಹಿಂದೆ FC Clearence ಸಿಕ್ಕಿದ್ದು, ಸದರಿ ಪ್ರದೇಶ ಹಾಲಿ ನವೀಕರಿಸಿದ 103.73 ಹೆ. ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿದ್ದರೂ, ದೂರರ್ಜಿಯಲ್ಲಿ ತಿಳಿಸಿರುವ ರಸ್ತೆಗಳು ಸರ್ಕಾರದಿಂದ ಮಂಜೂರಾತಿ ನೀಡಿದ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಸದರಿ ರಸ್ತೆಗಳನ್ನು ಅನಧಿಕೃತವಾಗಿ ನಿರ್ಮಿಸಿ ಮೆ:ಮಿನರಲ್ಸ್ ಎಂಟರ್‌ಪ್ರೈಸಸ್ ಲಿಮಿಟೆಡ್, ಬೆಂಗಳೂರುರವರು ಅದಿರನ್ನು ಸಾಗಿಸಲು ಉಪಯೋಗಿಸುತ್ತಿರುವುದರ ಬಗ್ಗೆ ಪ್ಯಾರಾ 36 ರಲ್ಲಿತಿಳಿಸಿದ್ದು ದೃಢೀಕರಿಸುತ್ತದೆ.

ದೂರರ್ಜಿಯಲ್ಲಿ ತಿಳಿಸಿದ ಈ ಕೆಳಗಿನ ರಸ್ತೆ FC Clearence ಸಂಬಂಧ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈವರೆಗೆ ಸದರಿ ಪ್ರಸ್ತಾವನೆಗೆ ಮಂಜೂರಾತಿ ಇರುವುದಿಲ್ಲ. ಆದರೂ ಸದರಿ ರಸ್ತೆ ಉಪಯೋಗಿಸುತ್ತಿರುವುದು ಕಂಡುಬಂದಿರುತ್ತದೆ.

| | |
|---|---|
| Area proposed for approach roads outside the lease area (A-B as shown in the map | 2.62 Ha. |
| Area proposed for road connecting with neighbouring M.L.No.2388 to the BBH Railway siding (B-C as shown in the map | 2.82 Ha. |
| | 5.44 Ha. |

ಸದರಿ ರಸ್ತೆಗಳ ಅಗಲೀಕರಣ ಬಗ್ಗೆ ದಿ.19/11/2011 ರಂದು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ಹಾಲಿ ಸದರಿ ರಸ್ತೆಯ ಅಗಲ ಗಮನಿಸಿದ್ದಲ್ಲಿ, ಅನಧಿಕೃತವಾಗಿ ಸದರಿ ರಸ್ತೆಯನ್ನು ಅಗಲೀಕರಣಗೊಳಿಸಿರುವುದು ಕಂಡುಬರುತ್ತದೆ. ಹಾಲಿ ಸದರಿ ರಸ್ತೆ ಉದ್ದಗಲ ಅಳತೆ ಈ ಕೆಳಕಂಡಂತೆ ಇರುತ್ತದೆ.

(1) Road connecting to the railway siding with length of 2352 Mtrs. And width of 12 Mtrs to an extent of 2.82 ha.
(2) Road from Mining Lease to SH-48 with length of 1752 Mtrs and width of 15 Mtrs to an extent of 2.62 ha.

ದಿ.27/3/2017 ರಂದು ಮಾಡಿಕೊಂಡ ಕರಾರುನಾಮೆಯಲ್ಲಿ ನಕ್ಷೆಯಲ್ಲಿ ಬಿ ಯಿಂದ ಸಿ ವರೆಗಿನ ರಸ್ತೆಯು ಮೇಲಿನ ಪ್ರಸ್ತಾವನೆಯಲ್ಲಿ ತಿಳಿಸಿದ ರಸ್ತೆ ಭಾಗವಾಗಿರುವುದು ತಿಳಿದು ಬರುತ್ತದೆ. ಸದರಿ ರಸ್ತೆಯ ಅಗಲ 12.00 ಮೀ. ಇದ್ದರೂ 8.00 ಮೀ ಎಂದು ನಕ್ಷೆಯಲ್ಲಿ ಗುರ್ತಿಸಲಾಗಿದೆ.

ಕಾರಣ, ಸದರಿ ದೂರರ್ಜಿಯಲ್ಲಿ ತಿಳಿಸಿದಂತೆ, ಸರ್ಕಾರದ ಮಂಜೂರಾತಿ ಪಡೆಯದೆ ಅನಧಿಕೃತ ರಸ್ತೆ ನಿರ್ಮಿಸಿ, ಅಗಲೀಕರಣಗೊಳಿಸಿ ಅನಧಿಕೃತವಾಗಿ ಸದರಿ ರಸ್ತೆಯಲ್ಲಿ ಮೆ:ಮಿನರಲ್ಸ್ ಎಂಟರ್‌ಪ್ರೈಸಸ್, ಬೆಂಗಳೂರು ರವರು ಎಂ.ಎಲ್.2346 ಗಣಿಯಿಂದ ಅದಿರನ್ನು ಸಾಗಿಸುತ್ತಿರುವುದು ದೃಢಪಟ್ಟಿದೆ.

ii. ದೂರರ್ಜಿಯ 3ನೇ ಅಂಶಗಳ ಬಗ್ಗೆ

3) ನೀರ್ತಾಡಿ ಅರಣ್ಯ ಪ್ರದೇಶದ ದಿಂಡದಹಳ್ಳಿ ಗ್ರಾಮ ಸ.ನಂ.18 ರಲ್ಲಿಯ ಬ್ಲಾಕ್ 3 ಗಣಿ ಪ್ರದೇಶದಿಂದ ಬಿಬಿಹೆಚ್ ರೈಲ್ವೇ ಸೈಡಿಂಗಗವರೆಗಿನ ಅನಧಿಕೃತವಾಗಿ ರಸ್ತೆ ನಿರ್ಮಾಣದ ಬಗ್ಗೆ.

ಈ ಹಿಂದಿನ ಕರಾರುನಾಮೆಯಲ್ಲಿ ಹಾಲಿ ಬ್ಲಾಕ್ 3 ಪ್ರದೇಶವು ಕಂದಾಯ ಭೂಮಿ ಎಂದು ನಮೂದಿಸಿದ್ದರೂ ನಕ್ಷೆಯಲ್ಲಿ ಪರಿಶೀಲಿಸಿದಂತೆ ಸದರಿ ಬ್ಲಾಕ್ 3 ರ ವಾಯುವ್ಯ ಭಾಗದ ಪ್ರದೇಶವು ಭಾಗಶಃ ನೀರ್ತಾಡಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ಬರುತ್ತಿದ್ದು, ಸದರಿ ಪ್ರದೇಶದಲ್ಲಿ ರಸ್ತೆ ನಿರ್ಮಾಣ ಮಾಡಲು ಮಂಜೂರಾತಿ ಇರುವುದಿಲ್ಲ. ಕಾರಣ ನೀರ್ತಾಡಿ ಅರಣ್ಯ ಪ್ರದೇಶದ ದಿಂಡದಹಳ್ಳಿ ಗ್ರಾಮ ಸ.ನಂ.18 ರಲ್ಲಿಯ ಬ್ಲಾಕ್ 3 ಗಣಿ ಪ್ರದೇಶದಿಂದ ಬಿಬಿಹೆಚ್ ರೈಲ್ವೆ ಸೈಡಿಂಗ್‌ವರೆಗಿನ ರಸ್ತೆಯು ಅನಧಿಕೃತವಾಗಿ ನಿರ್ಮಾಣ ಮಾಡಿರುವುದು ದೃಢಪಟ್ಟಿದೆ.

iii. ದೂರರ್ಜಿಯ 4ನೇ ಅಂಶಗಳ ಬಗ್ಗೆ

4) ದಿ.4/6/2013, 18/6/2013 ಮತ್ತು 19/8/2013 ರಂದು ಮಾಹಿತಿ ಹಕ್ಕು ಕಾಯಿದೆಯಂತೆ ಕೋರಿದ ಮಾಹಿತಿಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಉಪ ಅರಣ್ಯ

ಸಂರಕ್ಷಣಾಧಿಕರಿಗಳು, ಚಿತ್ರದುರ್ಗ ವಿಭಾಗ, ಚಿತ್ರದುರ್ಗರವರು ಅಪೂರ್ಣವಾಗಿ ನೀಡಿರುವ ಬಗ್ಗೆ.

ಸದರಿ ವಿಷಯದ ಬಗ್ಗೆ ಮೇಲ್ಮನವಿ ಪ್ರಾಧಿಕಾರ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿರವರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದ್ದು, ಈ ಬಗ್ಗೆ ದೂರರ್ಜಿಯಲ್ಲಿ ವಿವರಣೆ ಇರುವುದಿಲ್ಲ. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (State Chief Information Commissioner), ಕರ್ನಾಟಕ ಮಾಹಿತಿ ಆಯೋಗ (Karnataka Information Commission), ಬೆಂಗಳೂರು ರವರಿಗೆ ಮೇಲ್ಮನವಿ ಸಲ್ಲಿಸಿ ಸದರಿ ಮಾಹಿತಿಯನ್ನು ಪಡೆಯಲು ಅವಕಾಶವಿದೆ.

iv. ದೂರರ್ಜಿಯ 5ನೇ ಅಂಶಗಳ ಬಗ್ಗೆ

5) ಈ ಮೇಲಿನ ಎಲ್ಲಾ ಕಾರಣಗಳಿಂದ ಸಂಬಂಧಪಟ್ಟ ಅಧಿಕಾರಿಗಳು ಮೆ:ಮಿನರಲ್ಸ್ ಎಂಟರ್‌ಪ್ರೈಸಸ್ ಲಿಮಿಟೆಡ್ ರವರಿಗೆ ಮೌನಸಮ್ಮತಿ ನೀಡಿ ಭ್ರಷ್ಟಾಚಾರ ತಡೆ ಕಾಯಿದೆ ಕಲಂ 13(1)(ಡಿ) ಆರ್/ಡಬ್ಲ್ಯೂ 13(2) ರಂತೆ ಶಿಕ್ಷಾರ್ಹ ಅಪರಾಧವೆಸಗಿದ ಬಗ್ಗೆ. ಅಲ್ಲದೆ ಸದರಿ ಕಂಪನಿಯವರು ಅನಧಿಕೃತವಾಗಿ ರಸ್ತೆ ನಿರ್ಮಾಣ ಮಾಡಿ ಉಪಯೋಗಿಸುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಮೋಸ ಮಾಡಿ ಐ.ಪಿ.ಸಿ. ಕಲಂ 420 ಆರ್/ಡಬ್ಲ್ಯೂ 120–ಬಿ ರೀತ್ಯ ಶಿಕ್ಷಾರ್ಹ ಅಪರಾಧವೆಸಗಿರು ಬಗ್ಗೆ.

ದೂರರ್ಜಿದಾರರ ಹತ್ತಿರ ಈ ಸಂಬಂಧ ಸಮರ್ಥಿಸಬಹುದಾದ ದಾಖಲೆಗಳು ಹಾಗೂ ಪುರಾವೆಗಳು ಇದ್ದಲ್ಲಿ ಗೌರವಾನ್ವಿತ ಘನ ಲೋಕಾಯುಕ್ತರು, ಕರ್ನಾಟಕ, ಬೆಂಗಳೂರುರವರಿಗೆ ಸಲ್ಲಿಸಿ ನ್ಯಾಯ ಪಡೆಯಬಹುದಾಗಿದೆ.

9. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿ ಆಪಾದಿಸಿರುವ ಆಪಾದನೆಯ ಅವಧಿಯಲ್ಲಿ ಅವರುಗಳು ಕರ್ತವ್ಯ ನಿರ್ವಹಿಸಿರುವುದಿಲ್ಲವೆಂದು ಹೇಳಿದ್ದು, ತನಿಖಾಧಿಕಾರಿಯವರು ತನ್ನ ವರದಿಯಲ್ಲಿ ಪ್ರಶ್ನಿತ ಸಮಯದಲ್ಲಿ ಯಾರು ಕರ್ತವ್ಯದಲ್ಲಿದ್ದರು ಎನ್ನುವ ಬಗ್ಗೆ ವರದಿಯಲ್ಲಿ ತಿಳಿಸಿರುವುದಿಲ್ಲ. ಆದ್ದರಿಂದ, ದೂರಿನಲ್ಲಿ ಆಪಾದನೆ ಮಾಡಲಾದ ಆಪಾದನೆಯ ಸಂದರ್ಭದಲ್ಲಿ ಅರಣ್ಯ ಅಧಿಕಾರಿ, ಸಹಾಯಕ ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿಯಾಗಿ ಯಾರು ಕರ್ತವ್ಯದಲ್ಲಿದ್ದರು ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅರಣ್ಯ ಪ್ರದೇಶದಲ್ಲಿ ರಸ್ತೆಯನ್ನು ಮಾಡಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವಿಫಲರಾದ ಅಧಿಕಾರಿಗಳ ವಿವರಗಳನ್ನು ನೀಡುವಂತೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಅರಣ್ಯ ಭವನ ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

10. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ ಇವರಿಂದ ವರದಿಯನ್ನು ಪಡೆದು ಅಧಿಕಾರಿಗಳ ವಿವರಗಳನ್ನು ಸಲ್ಲಿಸಿದ್ದು, ಅದನ್ನು ಪರಿಶೀಲಿಸಿದಾಗ, ಹೊಳಲ್ಕೆರೆ ವಲಯದಲ್ಲಿ 1ನೇ ಎದುರುದಾರರಾದ ಶ್ರೀ.ಎಸ್.ಕುಮಾರಸ್ವಾಮಿಯವರು 8/2/2008 ರಿಂದ 5/2/2009 ರ ತನಕ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ, 31/10/2011 ರಿಂದ 21/4/14 ರ ತನಕ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದು, 2ನೇ ಎದುರುದಾರರಾದ ಭೈರಾರೆಡ್ಡಿ ಇವರು 25/5/2012 ರಿಂದ 29/5/14 ರವರೆಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದುದು, ಅದೇರೀತಿ 3ನೇ ಎದುರುದಾರರಾದ ಚಂದ್ರಪ್ಪ ಎನ್ನುವವರು 28/6/12

ರಿಂದ 31/12/14 ರವರೆಗೆ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದು ಕಂಡುಬರುತ್ತದೆ. ಅದನ್ನು ಪರಿಶೀಲಿಸಿದಾಗ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿರುವ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಕಂಡುಬರುತ್ತದೆ. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಕರ್ತವ್ಯಲೋಪ ಎಸಗಿರುವ ಅಂಶ ಕಂಡುಬರುತ್ತಿದ್ದು, ಅವರುಗಳು ಸಲ್ಲಿಸಿರುವ ಆಕ್ಷೇಪಣೆಗಳು ಅವರ ಮೇಲಿನ ಆಪಾದನೆಗಳನ್ನು ಅಲ್ಲಗಳೆಯಲು ಸಮಂಜಸವಾಗಿರುವುದಿಲ್ಲ. ಆದ್ದರಿಂದ, 1 ರಿಂದ 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

11. 1 ರಿಂದ 3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಹಾಗೂ **ಶ್ರೀ.ಕುಮಾರಸ್ವಾಮಿ ಇವರು ದಿ.30/6/2014 ರಂದು ಹಾಗೂ ಶ್ರೀ.ಚಂದ್ರಪ್ಪ ಇವರು ದಿ.31/12/2014 ರಂದು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 12/2/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.